ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು.

ಸಂಖ್ಯೆ : ಸಿ3(1).ವೃಂದ ಬಲ. ಜಿಲ್ಲಾ ಹಂ / 2017-18 ದಿನಾಂಕ : 02/02/2018

## ಅಧಿಸೂಚನೆ

ವಿಷಯ:- ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಯ ಪದನಾಮ ಬದಲಾವಣೆಯೊಂದಿಗೆ ಹೊಸ ವೃಂದ ಮತ್ತು ವೃಂದಬಲ ನಿರ್ಧರಿಸುವ ಬಗ್ಗೆ – ಜಿಲ್ಲಾವಾರು ಹಂಚಿಕೆ ಕ್ರಮಗಳನ್ನು ಕೈಗೊಳ್ಳುವ ಬಗ್ಗೆ

ಉಲ್ಲೇಖ:-1. ಸರ್ಕಾರದ ಆದೇಶ ಸಂಖ್ಯೆ ಇಡಿ 626 ಪಿಬಿಎಸ್ 2014 ದಿನಾಂಕ 19.05.2017.
2. ಸರ್ಕಾರದ ಆದೇಶ ಸಂಖ್ಯೆ ಇಡಿ 626 ಪಿಬಿಎಸ್ 2014 ದಿನಾಂಕ 07.08.2017.
3. 2017-18ನೇ ಸಾಲಿನ ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣೆ ಮಾರ್ಗಸೂಚಿಗಳು – ಸಿ3(7) ಪ್ರಾಶಿ ವರ್ಗ:01/ 2017-18 ದಿನಾಂಕ 29/12/2018

********

**ಪ್ರಸ್ತಾವನೆ :**
ಉಲ್ಲೇಖ-1ರ ಸರ್ಕಾರಿ ಆದೇಶದಲ್ಲಿ, 2017-18ನೇ ಶೈಕ್ಷಣಿಕ ಸಾಲಿನಿಂದ ಜಾರಿಗೆ ಬರುವಂತೆ, ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿನ ವಿವಿಧ ವೃಂದಗಳ ಒಟ್ಟು ವೃಂದಬಲವನ್ನು ಪರಿಷ್ಕರಿಸಿದಂತೆ, ಕೆಳಗಿನಂತೆ ನಿಗಧಿಪಡಿಸಲಾಗಿದೆ.

| ಕ್ರ.ಸಂ. | ವೃಂದ | ಮಂಜೂರಾದ ವೃಂದಬಲ |
|---|---|---|
| 1 | ಹಿರಿಯ ಮುಖ್ಯ ಶಿಕ್ಷಕರು | 1842 |
| 2 | ಮುಖ್ಯ ಶಿಕ್ಷಕರು | 15413 |
| 3 | ಪ್ರಾಥಮಿಕ ಶಾಲಾ ಶಿಕ್ಷಕರು (1 ರಿಂದ 5 ನೇ ತರಗತಿಗಳ) | 108915 |
| 4 | ಪದವೀಧರ ಪ್ರಾಥಮಿಕ ಶಿಕ್ಷಕರು (6 ರಿಂದ 8ನೇ ತರಗತಿಗಳ) | 52630 |
| 5 | ದೈಹಿಕ ಶಿಕ್ಷಣ ಶಿಕ್ಷಕರು ಹಿರಿಯ ಶ್ರೇಣಿ-II ಮತ್ತು ದರ್ಜೆ- II | 6772 |
| 6 | ಸಂಗೀತ ಶಿಕ್ಷಕರು | 259 |
| 7 | ಚಿತ್ರಕಲಾ ಶಿಕ್ಷಕರು | 224 |
| 8 | ನರ್ಸರಿ ಶಾಲಾ ಶಿಕ್ಷಕರು (ಎನ್.ಎಸ್.ಟಿ) | 2485 |
| | ಒಟ್ಟು | **188540** |

ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್(NCTE) ಮತ್ತು ಮಕ್ಕಳ ಕಡ್ಡಾಯ ಹಕ್ಕು ಶಿಕ್ಷಣ (RTE) ಕಾಯ್ದೆ ಅನ್ವಯ 1-5 ನೇ ತರಗತಿ ಮತ್ತು 6-8 ನೇ ತರಗತಿಗಳಿಗೆ ವಿಷಯಾಧಾರಿತ ಶಿಕ್ಷಕರ ಅವಶ್ಯಕತೆಯನ್ನು ಕಡ್ಡಾಯಗೊಳಿಸಲಾಗಿದೆ. ಸದರಿ

ತರಗತಿಗಳಿಗೆ ನೇಮಕವಾಗುವ ಶಿಕ್ಷಕರುಗಳಿಗೆ ವಿದ್ಯಾರ್ಹತೆಯನ್ನೂ ಸಹ ನಿಗಧಿಗೊಳಿಸಲಾಗಿದೆ. ಪ್ರಸ್ತುತ ಜಾರಿ ಇರುವ ವೃಂದಬಲವನ್ನು ಈ ಎಲ್ಲಾ ಹಿನ್ನಲೆಯಲ್ಲಿ ಪರಿಷ್ಕರಿಸಿ, ಶಾಲಾವಾರು ಅಗತ್ಯ ಹುದ್ದೆಗಳನ್ನು ನಿಗಧಿಪಡಿಸಬೇಕಾಗಿದೆ.

ಉಲ್ಲೇಖಿತ ಸರ್ಕಾರದ ಆದೇಶದಲ್ಲಿ, 1-5ನೇ ತರಗತಿಗಳಿಗೆ "ಪ್ರಾಥಮಿಕ ಶಾಲಾ ಸಹ ಶಿಕ್ಷಕ/ಶಿಕ್ಷಕಿ" ವೃಂದವನ್ನು "ಪ್ರಾಥಮಿಕ ಶಾಲಾ ಶಿಕ್ಷಕರು 1-5 ನೇ ತರಗತಿ" ಎಂಬುದಾಗಿ ಪುನರ್ ಪದನಾಮೀಕರಿಸಿ, ಕೆಳಗಿನಂತೆ 2 ವರ್ಗಗಳ ಶಿಕ್ಷಕರನ್ನು ಆ ತರಗತಿಗಳಿಗೆ ಗುರುತಿಸಲಾಗಿದೆ.

1. ಪ್ರಾಥಮಿಕ ಶಾಲಾ ಶಿಕ್ಷಕರು (ಭಾಷೆಗಳು)
2. ಪ್ರಾಥಮಿಕ ಶಾಲಾ ಶಿಕ್ಷಕರು (ಗಣಿತ ಮತ್ತು ವಿಜ್ಞಾನ).

ಹಾಗೆಯೇ, 6-8 ನೇ ತರಗತಿಗಳಿಗೆ "ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು 6-8ನೇ ತರಗತಿ" ಎಂಬ ಹೊಸ ವೃಂದವನ್ನು ಸೃಜಿಸಲಾಗಿದೆ. ಸದರಿ ವೃಂದದಲ್ಲಿ ಕೆಳಗಿನಂತೆ 3 ವರ್ಗದ ಶಿಕ್ಷಕರು ಇರುತ್ತಾರೆ.

1. ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (ಭಾಷೆಗಳು)
2. ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (ಗಣಿತ ಮತ್ತು ವಿಜ್ಞಾನ)
3. ಪದವೀಧರ ಪ್ರಾಥಮಿಕ ಶಾಲಾ ಶಿಕ್ಷಕರು (ಸಮಾಜ ವಿಜ್ಞಾನ)

ಈಗಾಗಲೇ, ಉಲ್ಲೇಖ-2ರಲ್ಲಿ ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ (NCTE) ನಿಗಧಿಪಡಿಸಿರುವ ವಿದ್ಯಾರ್ಹತೆಯ ಮಾನದಂಡಗಳಿಗೆ ಅನುಗುಣವಾಗಿ 'ಪ್ರಾಥಮಿಕ ಶಾಲಾ ಶಿಕ್ಷಕರ ವೃಂದ ಮತ್ತು ನೇಮಕಾತಿ ನಿಯಮ'ಗಳನ್ನು ಪರಿಷ್ಕರಿಸಲಾಗಿದ್ದು, ರಾಜ್ಯ ಪತ್ರದಲ್ಲಿ ಪ್ರಕಟಿಸಲಾಗಿದೆ.

ಉಲ್ಲೇಖ-1ರ ಸರ್ಕಾರಿ ಆದೇಶದಂತೆ ಪ್ರಾಥಮಿಕ ಶಾಲೆಗಳ ವಿವಿಧ ವೃಂದಗಳಿಗೆ ಒಟ್ಟಾರೆಯಾಗಿ ನಿಗಧಿಯಾಗಿರುವ ಒಟ್ಟು 1,88.540 ಬಲದ ಹುದ್ದೆಗಳ ಕುರಿತು ಜಿಲ್ಲಾವಾರು ಹಂಚಿಕೆ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಪ್ರಯುಕ್ತ ಈ ಅಧಿಸೂಚನೆ.

**<u>ಅಧಿಸೂಚನೆ</u> :**

ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಿಗೆ, ರಾಷ್ಟ್ರೀಯ ಶಿಕ್ಷಕರ ಶಿಕ್ಷಣ ಪರಿಷತ್ (NCTE) ಮತ್ತು ಮಕ್ಕಳ ಕಡ್ಡಾಯ ಶಿಕ್ಷಣ ಹಕ್ಕು (RTE) ಕಾಯ್ದೆಯ ಹಿನ್ನಲೆಯಲ್ಲಿ ಉಲ್ಲೇಖ-1 ರ ಸರ್ಕಾರಿ ಆದೇಶದನ್ವಯ ಪರಿಷ್ಕರಿಸಿ ಮಂಜೂರು ಮಾಡಿರುವ ಒಟ್ಟಾರೆ 1,88540 ವೃಂದಬಲದ ಹುದ್ದೆಗಳನ್ನು ಅನುಬಂಧದಂತೆ ಜಿಲ್ಲಾವಾರು ಹಂಚಿಕೆ ಮಾಡಲಾಗಿದೆ ಮತ್ತು ಸಂಬಂಧಿಸಿದಂತೆ ಕೆಳಗಿನ ಕ್ರಮಗಳನ್ನು ಸೂಚಿಸಿದೆ (ಅನುಬಂಧ 1).

1. ಸದರಿ ಹಂಚಿಕೆ ಕೋಷ್ಟಕದಲ್ಲಿ ನಮೂದಿಸಿರುವ ಹುದ್ದೆಗಳ ಸಂಖ್ಯೆಯು, ಪ್ರಸ್ತುತದಲ್ಲಿ ಅಳವಡಿಸಿಕೊಳ್ಳಲಾಗಿರುವ Rationalized RTE ನಿಯಮಗಳ ಲೆಕ್ಕಾಚಾರದಂತೆ ಇದೆ. ದಿನಾಂಕ 02.07.2016ರ ಹೆಚ್ಚುವರಿ ಶಿಕ್ಷಕರ ಸ್ಥಳ ನಿಯುಕ್ತಿ ಮಾರ್ಗಸೂಚಿ ಸುತ್ತೋಲೆ ಜೊತೆಗೆ ಒದಗಿಸಲಾಗಿದ್ದ "Recalculated excel sheet" ನಲ್ಲಿ ಶಾಲಾವಾರು ಮತ್ತು ಆ ಮೂಲಕ ದೃಢೀಕೃತ ಜಿಲ್ಲಾವಾರು ಸಹ ಶಿಕ್ಷಕರ ವೃಂದದ ಒಟ್ಟಾರೆ ಹುದ್ದೆಗಳ ಲೆಕ್ಕಾಚಾರ ನೀಡಿದ್ದ ಸಂದರ್ಭದಲ್ಲಿ ಈ ಅಂಕಿ ಅಂಶಗಳನ್ನು ತಿಳಿಯಪಡಿಸಲಾಗಿತ್ತು, ಈ ಮೂಲ ಅಂಕಿ-ಅಂಶಗಳನ್ನು ಆಧಾರವಾಗಿಟ್ಟುಕೊಂಡು ಜಿಲ್ಲೆಗೆ ಹಂಚಿಕೆಯಾಗಿರುವ ಒಟ್ಟು ಹುದ್ದೆಗಳನ್ನು ತೋರಿಸಲಾಗಿದೆ. "Recalculated excel sheet"ನಲ್ಲಿ ತೋರಿಸಲಾಗಿದ್ದ ಮಾದರಿಯಂತೆಯೇ ಶಾಲೆಗಳಿಗೆ ಹುದ್ದೆಗಳನ್ನು ಹಂಚಿಕೆ ಮಾಡತಕ್ಕದ್ದು.

2. ಒಟ್ಟಾರೆ ಜಿಲ್ಲೆಯ ಬಡ್ತಿ ಮುಖ್ಯ ಶಿಕ್ಷಕರ ಮತ್ತು ಪದವೀಧರೇತರ ಮುಖ್ಯ ಶಿಕ್ಷಕರ ವೃಂದದ ಹುದ್ದೆಗಳ ಜಿಲ್ಲಾ ಹಂಚಿಕೆಯನ್ನು ತೋರಿಸಲಾಗಿದೆ. ಬಡ್ತಿ ಮುಖ್ಯ ಶಿಕ್ಷಕರ ಹುದ್ದೆಯನ್ನು "ಮುಖ್ಯ ಶಿಕ್ಷಕರು" ಎಂಬುದಾಗಿ ಮತ್ತು ಪದವೀಧರೇತರ ಮುಖ್ಯ ಶಿಕ್ಷಕರನ್ನು ಹಾಗು ಪದವಿ ಮುಖ್ಯ ಶಿಕ್ಷಕರನ್ನು "ಹಿರಿಯ ಮುಖ್ಯ ಶಿಕ್ಷಕರು" ಎಂಬುದಾಗಿ ಪದನಾಮೀಕರಿಸಲಾಗಿದೆ.

3. ಜಿಲ್ಲೆಗೆ ಹಂಚಿಕೆಯಾಗಿರುವ ದೈಹಿಕ ಶಿಕ್ಷಕರು, ಸಂಗೀತ ಮತ್ತು ಚಿತ್ರಕಲಾ ಶಿಕ್ಷಕರ ಹುದ್ದೆಗಳನ್ನು ತೋರಿಸಲಾಗಿದೆ. ಈ ಹಿಂದೆ ಮಂಜೂರಾದ ಹುದ್ದೆಗಳ ಸಂಖ್ಯೆಗೆ ಅನುಗುಣವಾಗಿಯೇ ಸದರಿ ಹುದ್ದೆಗಳ ಸಂಖ್ಯೆ ಮುಂದುವರೆದಿದೆ.

4. ಕ್ಷೀಣಿಸುವ ವೃಂದಬಲವಾದ ನರ್ಸರಿ ಶಾಲಾ ಶಿಕ್ಷಕರ (ಶಾಲಾಮಾತೆ) ಹುದ್ದೆಗಳ ಮೂಲಸಂಖ್ಯೆಯ ಅಂಕಿ-ಅಂಶದ ವಿವರ ಜಿಲ್ಲೆಯಲ್ಲಿ ಲಭ್ಯವಿದೆ. ಸದರಿ ಮೂಲ ಸಂಖ್ಯೆಯನ್ನೊಳಗೊಂಡಂತೆ ಒಟ್ಟಾರೆಯಾಗಿ ಜಿಲ್ಲೆಗೆ ಸಹ ಶಿಕ್ಷಕರ ಹುದ್ದೆಗಳು ಹಂಚಿಕೆಯಾಗಿರುತ್ತವೆ ಎಂಬದನ್ನು ಗಮನಿಸುವುದು. ಯಾವುದೇ ಶಾಲೆಯಲ್ಲಿ 120 ಕ್ಕಿಂತ ಹೆಚ್ಚಿನ ದಾಖಲಾತಿ ಇದ್ದು 240 ವರೆಗೆ ನಲಿ-ಕಲಿ ತರಗತಿಗೆ 01 ಹೆಚ್ಚುವರಿ ಹುದ್ದೆ ನೀಡಬೇಕಾಗಿದ್ದು ಅಂತಹ ಶಾಲೆಗೆ ಆದ್ಯತೆ ಮೇಲೆ ಶಾಲಾ ಮಾತೆ ಹುದ್ದೆಯನ್ನು ನೀಡತಕ್ಕದ್ದು. ಉಳಿದಂತೆ ಅತಿ ಹೆಚ್ಚು ದಾಖಲಾತಿ ಇರುವ ಶಾಲೆಗಳಲ್ಲಿ ಹೆಚ್ಚುವರಿಯಾಗಿ ನೀಡುವ ಹುದ್ದೆಗಳ ಗಣನೆಯಲ್ಲಿ ಶಾಲಾ ಮಾತೆಯ ಹುದ್ದೆಯನ್ನು ನೀಡತಕ್ಕದ್ದು.

5. ಕಿರಿಯ ಹಾಗು ಹಿರಿಯ ಪ್ರಾಥಮಿಕ ತರಗತಿಗಳನ್ನು ಪ್ರತ್ಯೇಕ ಘಟಕಗಳನ್ನಾಗಿ ಪರಿಗಣಿಸಿ ದಾಖಲಾತಿ ಸಂಖ್ಯೆಯನ್ನು ಪರಿಗಣಿಸಿ ಶಾಲೆಗಳಿಗೆ ಒಟ್ಟು ಸಂಖ್ಯೆಯ ಹುದ್ದೆಗಳ ಹಂಚಿಕೆಯನ್ನು "Recalculated excel sheet"ನಲ್ಲಿ ತೋರಿಸಲಾದ ಮಾದರಿಯಲ್ಲಿಯೇ ಉಪನಿರ್ದೇಶಕರು ಕ್ರಮ ಕೈಗೊಳ್ಳತಕ್ಕದ್ದು. ರಾಜ್ಯದಲ್ಲಿ ಅಳವಡಿಸಿಕೊಂಡಿರುವ ಆರ್.ಟಿ.ಇ ಕಾಯ್ದೆಯಲ್ಲಿನ ಮಾನದಂಡದ ಮಾದರಿಯ ಆಧಾರಿತ ನಿಯಮಗಳ 'ಪ್ರಾತಿನಿಧಿಕ ಕೋಷ್ಟಕ'ವನ್ನು ಲಗತ್ತಿಸಿದೆ.

6. ಹುದ್ದೆಗಳ ಹಂಚಿಕೆಯನ್ನು ಕೈಗೊಳ್ಳುವಾಗ 1-5ನೇ ತರಗತಿಗಳಿಗೆ ಕೆಳಗಿನಂತೆ 2 ವರ್ಗದ ಮತ್ತು 6-8ನೇ ತರಗತಿಗಳಿಗೆ ಕೆಳಗಿನಂತೆ 2/3 ವರ್ಗದ ಕನಿಷ್ಟ ಸಂಖ್ಯೆಯ ಹುದ್ದೆಗಳನ್ನು ಹಂಚಿಕೆ ಮಾಡತಕ್ಕದ್ದು.

**<u>1-5ನೇ ತರಗತಿಗಳಿಗೆ (ಕಿರಿಯ ಪ್ರಾಥಮಿಕ)</u>**
ಕನಿಷ್ಟ 02 ಹುದ್ದೆಗಳು. ನಂತರ ದಾಖಲಾತಿ ಆಧಾರದಲ್ಲಿ ಅನುಪಾತದಂತೆ,
1-5 ನೇ ತರಗತಿಗಳಿಗೆ (ಭಾಷೆಗಳು)
1-5 ನೇ ತರಗತಿಗಳಿಗೆ (ಗಣಿತ ಮತ್ತು ವಿಜ್ಞಾನ)

**<u>6-7ನೇ ತರಗತಿ ಮಾತ್ರ ಇದ್ದಲ್ಲಿ (ಹಿರಿಯ ಪ್ರಾಥಮಿಕ)</u>,**
ಕನಿಷ್ಟ 02 ಹುದ್ದೆಗಳು. ನಂತರ ದಾಖಲಾತಿ ಆಧಾರದಲ್ಲಿ ಅನುಪಾತದಂತೆ,
6-8 ನೇ ತರಗತಿಗಳಿಗೆ (ಭಾಷೆಗಳು)
6-8 ನೇ ತರಗತಿಗಳಿಗೆ (ಗಣಿತ ಮತ್ತು ವಿಜ್ಞಾನ)

**<u>6-8ನೇ ತರಗತಿಗಳಿಗೆ ( ಹಿರಿಯ ಪ್ರಾಥಮಿಕ)</u>,**
ಕನಿಷ್ಟ 03 ಹುದ್ದೆಗಳು. ನಂತರ ದಾಖಲಾತಿ ಆಧಾರದಲ್ಲಿ ಅನುಪಾತದಂತೆ,
6-8 ನೇ ತರಗತಿಗಳಿಗೆ (ಭಾಷೆಗಳು)
6-8 ನೇ ತರಗತಿಗಳಿಗೆ (ಗಣಿತ ಮತ್ತು ವಿಜ್ಞಾನ)
6-8 ನೇ ತರಗತಿಗಳಿಗೆ (ಸಮಾಜ ಪಾಠಗಳು)

7. ಹುದ್ದೆಗಳ ರೋಷ್ಟರ್ : ಕಿರಿಯ ಪ್ರಾಥಮಿಕ (1 – 5ನೇ ತರಗತಿ) ತರಗತಿಗಳಿಗೆ ದಾಖಲಾತಿ ಆಧಾರದ ಮೇಲೆ 3ನೇ ಹುದ್ದೆಯ ಹಾಗು ಅದಕ್ಕೂ ಹೆಚ್ಚಿನ ಸಂಖ್ಯೆಯ ಹುದ್ದೆಗಳನ್ನು ಹಂಚಿಕೆ ಮಾಡುವಾಗ ಹಾಗು ಹಿರಿಯ ಪ್ರಾಥಮಿಕ (6–7ನೇ ತರಗತಿಗಳಿರುವ) ಮತ್ತು (6–8ನೇ) ತರಗತಿಗಳಿರುವ ಕಡೆ 3,4,5,6ನೇ ಹುದ್ದೆಯ ಹಾಗು ಅದಕ್ಕೂ ಹೆಚ್ಚಿನ ಸಂಖ್ಯೆಯ ಹುದ್ದೆಗಳನ್ನು ಹಂಚಿಕೆ ಮಾಡುವಾಗ ಕೆಳಗಿನಂತೆ ಹುದ್ದೆಗಳ ರೋಷ್ಟರ್ ಅನ್ನು ಪಾಲಿಸತಕ್ಕದ್ದು. ಅಲ್ಪ ಸಂಖ್ಯಾತ ಭಾಷಾ ಮಾಧ್ಯಮದ ಶಾಲೆಗಳಲ್ಲಿ ಒಂದು ಕನ್ನಡ ಶಿಕ್ಷಕರ ಹುದ್ದೆಯನ್ನು ಹಂಚಿಕೆ ಮಾಡತಕ್ಕದ್ದು.

**<u>1–5 ನೇ (ಕಿರಿಯ ಪ್ರಾಥಮಿಕ) ತರಗತಿಗಳಿಗೆ</u>**

1ನೇ ಹುದ್ದೆ (ಭಾಷೆಗಳು) (ಆಯಾ ಮಾಧ್ಯಮದ ಭಾಷೆ)
2ನೇ ಹುದ್ದೆ (ಗಣಿತ ಮತ್ತು ವಿಜ್ಞಾನ)
3ನೇ ಹುದ್ದೆ (ಭಾಷೆಗಳು) (ಆಂಗ್ಲ)
4ನೇ ಹುದ್ದೆ (ಗಣಿತ ಮತ್ತು ವಿಜ್ಞಾನ)
5ನೇ ಹುದ್ದೆ (ಭಾಷೆಗಳು) (ಆಯಾ ಮಾಧ್ಯಮದ ಭಾಷೆ ಹೀಗೆ.

**<u>6–8 ನೇ (ಹಿರಿಯ ಪ್ರಾಥಮಿಕ) ತರಗತಿಗಳಿಗೆ</u>**

1 ನೇ ಹುದ್ದೆ (ಭಾಷೆಗಳು) (ಆಯಾ ಮಾಧ್ಯಮದ ಭಾಷೆ)
2 ನೇ ಹುದ್ದೆ (ಗಣಿತ ಮತ್ತು ವಿಜ್ಞಾನ)
3 ನೇ ಹುದ್ದೆ (ಸಮಾಜ ಪಾಠಗಳು)
4 ನೇ ಹುದ್ದೆ (ಭಾಷೆಗಳು) (ಆಂಗ್ಲ)
5 ನೇ ಹುದ್ದೆ (ಗಣಿತ ಮತ್ತು ವಿಜ್ಞಾನ)
6 ನೇ ಹುದ್ದೆ (ಸಮಾಜ ಪಾಠಗಳು)
7 ನೇ ಹುದ್ದೆ (ಭಾಷೆಗಳು) (ಹಿಂದಿ)
8 ನೇ ಹುದ್ದೆ (ಗಣಿತ ಮತ್ತು ವಿಜ್ಞಾನ)
9 ನೇ ಹುದ್ದೆ (ಸಮಾಜ ಪಾಠಗಳು)
10 ನೇ ಹುದ್ದೆ (ಭಾಷೆಗಳು) (ಆಯಾ ಮಾಧ್ಯಮದ ಭಾಷೆ) ಹೀಗೆ.

8. ಮೇಲಿನಂತೆ, ವ್ಯಾಪ್ತಿಯ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಸೂಕ್ತ ನಿರ್ದೇಶನಗಳನ್ನು ನೀಡಿ ಶಾಲಾವಾರು ಹುದ್ದೆಗಳ ಸಂಖ್ಯೆಯನ್ನು ಖಾತ್ರಿ ಪಡಿಸಿಕೊಂಡು ಉಸ್ತುವಾರಿ ವಹಿಸಿ ಎಲ್ಲಾ ಕ್ರಮಗಳನ್ನು ಕೈಗೊಂಡು ವೃಂದವಾರು ಜಿಲ್ಲೆಯಲ್ಲಿನ ಒಟ್ಟು ಹುದ್ದೆಗಳ ಸಂಖ್ಯೆಗಳನ್ನು ನಮೂದಿಸಿ ದಿನಾಂಕ 15/02/2018ರೊಳಗೆ ಅಧಿಸೂಚನೆಯನ್ನು ಉಪನಿರ್ದೇಶಕರು (ಆಡಳಿತ) ಇವರು ಹೊರಡಿಸತಕ್ಕದ್ದು.

9. ಹಾಗೆಯೇ, ಕ್ಷೇತ್ರಶಿಕ್ಷಣಾಧಿಕಾರಿಗಳ ವ್ಯಾಪ್ತಿಯಲ್ಲಿ ಸೂಕ್ತ ಕ್ರಮಗಳನ್ನು ಕೈಗೊಂಡು ಶಾಲಾವಾರು ಹುದ್ದೆಗಳ ಸಂಖ್ಯೆಯನ್ನು ಖಾತ್ರಿ ಪಡಿಸಿಕೊಂಡು ವೃಂದವಾರು ತಾಲ್ಲೂಕಿನ ಒಟ್ಟು ಹುದ್ದೆಗಳ ಸಂಖ್ಯೆಗಳನ್ನು ನಮೂದಿಸಿ ದಿನಾಂಕ 28/02/2018ರೊಳಗೆ ಅಧಿಸೂಚನೆಯನ್ನು ಕ್ಷೇತ್ರಶಿಕ್ಷಣಾಧಿಕಾರಿಗಳು ಹೊರಡಿಸತಕ್ಕದ್ದು. ಶಾಲಾವಾರು ಹಂಚಿಕೆ ಮಾಡಿರುವ ಹುದ್ದೆಗಳ ಪಟ್ಟಿಯನ್ನು ಸಹ ಸದರಿ ಅಧಿಸೂಚನೆಗೆ ಅನುಬಂಧಗೊಳಿಸತಕ್ಕದ್ದು ಹಾಗು ಇಲಾಖಾ ವೆಬ್–ಸೈಟ್ ನಲ್ಲಿ ಪ್ರಕಟಿಸಲು ಈ ಕಛೇರಿಯ ಇ-ಗವರ್ನೆನ್ಸ್ ವಿಭಾಗದೊಂದಿಗೆ ಸಮನ್ವಯ ಕಾರ್ಯ ಕೈಗೊಳ್ಳತಕ್ಕದ್ದು.

10. ಶಾಲಾವಾರು ಹಂಚಿಕೆಯಾಗುವ ಹುದ್ದೆಗಳ ಬಗ್ಗೆ ಸದರಿ ಶಾಲೆಗಳ ಹುದ್ದೆ ಮಂಜೂರಾತಿ ವಹಿಯಲ್ಲಿ ಸೂಕ್ತವಾಗಿ ನಮೂದಿಸಿ ಕ್ಷೇತ್ರಶಿಕ್ಷಣಾಧಿಕಾರಿಗಳಿಂದ ದೃಢೀಕರಿಸಿಕೊಂಡು, ಖಾಯಂ ದಾಖಲೆಯನ್ನಾಗಿ ಶಾಲೆಯಲ್ಲಿ ಅಭಿರಕ್ಷಣೆಯಲ್ಲಿಡಲು ಕ್ರಮವಹಿಸತಕ್ಕದ್ದು. ಮುಖ್ಯ ಶಿಕ್ಷಕರು, ದೈಹಿಕ ಮತ್ತು ವಿಶೇಷ ಶಿಕ್ಷಕರ ಹುದ್ದೆಗಳ ಬಗ್ಗೆ ಚಾಲ್ತಿ ಆದೇಶಗಳು ಮುಂದುವರೆಯುತ್ತವೆ.

11. 60 ರಿಂದ 400ರ ದಾಖಲಾತಿಯವರೆಗೆ ಮುಖ್ಯಶಿಕ್ಷಕರ ಹುದ್ದೆಯನ್ನು (250ಕ್ಕಿಂತ ಮೇಲ್ಪಟ್ಟ ದಾಖಲಾತಿಗೆ ಆದ್ಯತೆಯಲ್ಲಿ ಹಿರಿಯ ಮುಖ್ಯಶಿಕ್ಷಕರ ಹುದ್ದೆ) ವಿದ್ಯಾರ್ಥಿ-ಶಿಕ್ಷಕರ ಅನುಪಾತದೊಳಗೆ ಪರಿಗಣಿಸತಕ್ಕದ್ದು.

12. ದೈಹಿಕ ಶಿಕ್ಷಕರ ಹುದ್ದೆಯನ್ನು 200ಕ್ಕಿಂತ ಹೆಚ್ಚಿನ ದಾಖಲಾತಿ ಇರುವ ಹಿರಿಯ ಪ್ರಾಥಮಿಕ ಶಾಲೆಗಳಿಗೆ ನೀಡುವುದು. ಅಂತಹ ಶಾಲೆಗಳು ಲಭ್ಯವಿಲ್ಲದಿದ್ದಲ್ಲಿ ನಂತರದಲ್ಲಿ ಇಳಿಕೆ ಕ್ರಮಾಂಕದಲ್ಲಿ ಹೆಚ್ಚಿನ ದಾಖಲಾತಿಗಳನ್ನು ಗುರುತಿಸಿ ಹಂಚಿಕೆ ಮಾಡತಕ್ಕದ್ದು.

13. 240 ಕ್ಕಿಂತ ಹೆಚ್ಚಿನ ದಾಖಲಾತಿಗಳಿದ್ದಲ್ಲಿ ಅಂತಹ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಸಂಗೀತ ಅಥವಾ ಚಿತ್ರಕಲೆ ಹುದ್ದೆಯನ್ನು ನೀಡತಕ್ಕದ್ದು. ಅಂತಹ ಶಾಲೆಗಳು ಲಭ್ಯವಿಲ್ಲದಿದ್ದಲ್ಲಿ ನಂತರದಲ್ಲಿ ಇಳಿಕೆ ಕ್ರಮಾಂಕದಲ್ಲಿ ಹೆಚ್ಚಿನ ದಾಖಲಾತಿ ಗುರುತಿಸಿ ಹಂಚಿಕೆ ಮಾಡತಕ್ಕದ್ದು

14. ಭಾಷಾ ಅಲ್ಪಸಂಖ್ಯಾತರ ಶಾಲೆಗಳಲ್ಲಿ ಕಡ್ಡಾಯವಾಗಿ ಕೋಷ್ಟಕದಂತೆ 120ರ ದಾಖಲಾತಿವರೆಗೆ 01 ಕನ್ನಡ ಭಾಷಾ ಶಿಕ್ಷಕರ ಹುದ್ದೆ, ನಲಿ-ಕಲಿ ಶಾಲೆಗಳಿಗೆ 120 ರಿಂದ 240ರ ದಾಖಲಾತಿಗೆ ಹೆಚ್ಚುವರಿಯಾಗಿ ಒಂದು ಶಿಕ್ಷಕರ ಹುದ್ದೆಯನ್ನೂ, ಮಲೆನಾಡು-ಗಿರಿ ಪ್ರದೇಶಗಳ ಶಾಲೆಗಳಿಗೆ 61 ರಿಂದ 120ರವರೆಗೆ ಹೆಚ್ಚುವರಿಯಾಗಿ 01 ಶಿಕ್ಷಕರ ಹುದ್ದೆಯನ್ನು ನೀಡತಕ್ಕದ್ದು.

15. 2017-18ನೇ ಸಾಲಿನ ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರ ವರ್ಗಾವಣೆ ಮಾರ್ಗಸೂಚಿಯಲ್ಲಿಯೂ ವಿಸ್ತೃತವಾದ ಸೂಚನೆಗಳನ್ನು ನೀಡಲಾಗಿದ್ದು ಸದರಿ ಸೂಚನೆಗಳನ್ನೂ ಸಹ ಪಾಲಿಸುವುದು

16. ಸರ್ಕಾರದ ಉಲ್ಲೇಖಿತ ಆದೇಶದ ಪ್ರತಿಯನ್ನು ಲಗತ್ತಿಸಿದೆ. ಸದರಿ ಆದೇಶದಂತೆ ಎಲ್ಲ ಅಂಶಗಳನ್ನು ಗಮನಿಸಿ ಮುಂದಿನ ಕ್ರಮಗಳನ್ನು ಕೈಗೊಳ್ಳತಕ್ಕದ್ದು. ಪುನರ್-ಪದನಾಮೀಕರಣ ಮಾಡಿದ 'ಪ್ರಾಥಮಿಕ ಶಾಲಾ ಶಿಕ್ಷಕರ (1 ರಿಂದ 5ನೇ ತರಗತಿಗಳ)' ವೃಂದದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆಯು, ಪ್ರಸ್ತುತ ಸರ್ಕಾರಿ ಆದೇಶದಲ್ಲಿ ನಿಗದಿಪಡಿಸಿದ ಮಂಜೂರಾದ ಹುದ್ದೆಗಳಿಗಿಂತ ಹೆಚ್ಚುವರಿಯಾಗಿದ್ದು, ಸದರಿ ಎಲ್ಲ ಶಿಕ್ಷಕರನ್ನು ಅದೇ ವೃಂದದಲ್ಲಿ ಅವರ ನಿವೃತ್ತಿವರೆಗೆ ಅಥವಾ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಹುದ್ದೆ ತೆರವಾಗಿ ಅವರನ್ನು ಅಲ್ಲಿಗೆ ನಿಯುಕ್ತಿಗೊಳಿಸುವವರೆಗೆ ಮತ್ತು ಆ ಎಲ್ಲ ಹುದ್ದೆಗಳಲ್ಲಿ ಪದವೀಧರ ಪ್ರಾಥಮಿಕ ಶಿಕ್ಷಕರು (6 ರಿಂದ 8ನೇ ತರಗತಿಗಳ) ವೃಂದಕ್ಕೆ ಆ ವೃಂದದ ನೇಮಕಾತಿ ಮಾನದಂಡಗಳ ಅನುಸಾರ ಸೇವಾ ನಿರತ ಶಿಕ್ಷಕರ ನೇಮಕಾತಿ ಆಗುವವರೆಗೆ ಮುಂದುವರೆಸಲಾಗಿದೆ.

17. ಆಯುಕ್ತರ ಕಛೇರಿಯ ಇ-ಆಡಳಿತದಿಂದ ಟೀಚರ್ ಡಾಟಾ ಬೇಸ್ (ಟಿಡಿಎಸ್)ನಲ್ಲಿನ ಮಾಹಿತಿಯು ಆಧಾರದ ಮೇಲೆ, ಡೈಸ್ ಶಾಖೆಯ ಸಮನ್ವಯದೊಂದಿಗೆ, ಆಯಾ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕನ್ನು ಮೇಲಿನ ವರ್ಗೀಕರಣದ ಭಾಷಾ / ವಿಜ್ಞಾನ-ಗಣಿತ / ಸಮಾಜ ಪಾಠಗಳು ಹುದ್ದೆಗೆ ಮ್ಯಾಪ್, ಮಾಡಿ ಜಿಲ್ಲೆಗಳಿಗೆ ಅತ್ಯಂತ ಜರೂರಾಗಿ ಎಕ್ಸೆಲ್ ಮಾದರಿಯಲ್ಲಿ ನೀಡಿ ವರ್ಗಾವಣೆಗೆ ಹುದ್ದೆಗಳ ಲೆಕ್ಕಾಚಾರಕ್ಕೆ ಮಾಹಿತಿ ಕೋಷ್ಟಕವನ್ನು ನೀಡತಕ್ಕದ್ದು. ಅದರಂತೆ ಉಪನಿರ್ದೇಶಕರು ಕ್ರಮಗಳನ್ನು ಕೈಗೊಳ್ಳತಕ್ಕದ್ದು.

18. ಮೇಲಿನಂತೆ ಎಲ್ಲ ಕ್ರಮಗಳನ್ನೂ ಕೈಗೊಂಡು ದಿನಾಂಕ 15/03/2018ರೊಳಗೆ ಈ ಕಛೇರಿಗೆ ವಿವರವಾದ ವರದಿಯನ್ನೂ ಹಾಗು ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಇರುವ ವಿಷಯವಾರು ಖಾಲಿ ಹುದ್ದೆಗಳು ಮತ್ತು ಮುಖ್ಯ ಶಿಕ್ಷಕರು, ಹಿರಿಯ ಮುಖ್ಯ ಶಿಕ್ಷಕರು, ದೈಹಿಕ ಶಿಕ್ಷಕರು, ಸಂಗೀತ,

ಚಿತ್ರಕಲೆ ಶಿಕ್ಷಕರ ಖಾಲಿ ಹುದ್ದೆಗಳ ವರದಿಯನ್ನು ಕೆಳಗಿನ ನಮೂನೆಯಲ್ಲಿ ದೃಢೀಕರಿಸಿ ಸಲ್ಲಿಸತಕ್ಕದ್ದು. ಶಾಲಾ ಮಾತೆ ಹುದ್ದೆಗಳು ರದ್ದಾಗುವ ಹುದ್ದೆಗಳಾಗಿದ್ದು ಆ ಕುರಿತಂತೆಯೂ ಅಂಕಿ-ಅಂಶವನ್ನು ನೀಡತಕ್ಕದ್ದು.

**ನಮೂನೆ**

**(ಉಪನಿರ್ದೇಶಕರು ಮೊಹರು ಸಹಿತ ದೃಢೀಕೃತ ಸಹಿ ನಮೂದಿಸಿ ಸಲ್ಲಿಸತಕ್ಕದ್ದು)**

**ಜಿಲ್ಲೆಯ ಹೆಸರು** :

| ತಾಲ್ಲೂಕಿನ ಹೆಸರು | ಎಲ್ಲ ವೃಂದ ಸೇರಿ ಒಟ್ಟು | ಒಟ್ಟು ಹಂಚಿಕೆಯಾದ ಹುದ್ದೆಗಳು (ಹೊಸ ವೃಂದ ಬಲದ ಆದೇಶದಂತೆ) | | | | | | | |
|---|---|---|---|---|---|---|---|---|---|
| | | ಪ್ರಾಥಮಿಕ ಶಾಲಾ (1 ರಿಂದ 5ನೇ ತರಗತಿ) (ಭಾಷೆ) ಹುದ್ದೆಗಳು | ಪ್ರಾಥಮಿಕ ಶಾಲಾ (1 ರಿಂದ 5ನೇ ತರಗತಿ) (ವಿಜ್ಞಾನ – ಗಣಿತ ಹುದ್ದೆಗಳು | ಪ್ರಾಥಮಿಕ ಶಾಲಾ (6 ರಿಂದ 8ನೇ ತರಗತಿ) (ಭಾಷೆ) ಹುದ್ದೆಗಳು | ಪ್ರಾಥಮಿಕ ಶಾಲಾ (6 ರಿಂದ 8ನೇ ತರಗತಿ) (ವಿಜ್ಞಾನ ಗಣಿತ) ಹುದ್ದೆಗಳು | ಪ್ರಾಥಮಿಕ ಶಾಲಾ (6 ರಿಂದ 8ನೇ ತರಗತಿ) (ಸಮಾಜ ಪಾಠಗಳು) ಹುದ್ದೆಗಳು | ಮಾಡಿರುವ ದೈಹಿಕ ಶಿಕ್ಷಕ ಹುದ್ದೆ | ಸಂಗೀತ ಶಿಕ್ಷಕ ಹುದ್ದೆ | ಮಾಡಿರುವ ಚಿತ್ರಕಲೆ ಶಿಕ್ಷಕ ಹುದ್ದೆ |
| **1** | **2** | **3** | **4** | **5** | **6** | **7** | **8** | **9** | **10** |
| ಒಟ್ಟು | | | | | | | | | |

| ಒಟ್ಟು ಹಂಚಿಕೆಯಾದ ಹುದ್ದೆಗಳು **(ಹೊಸ ವೃಂದ ಬಲದ ಆದೇಶದಂತೆ)** | | | **ಒಟ್ಟು ಖಾಲಿ ಇರುವ ಹುದ್ದೆಗಳ ಸಂಖ್ಯೆ (ಆಯಾ ವೃಂದವಾರು)** | | | | | | |
|---|---|---|---|---|---|---|---|---|---|
| ಮುಖ್ಯಶಿಕ್ಷಕ ಹುದ್ದೆ | ಹಿರಿಯ ಮುಖ್ಯ ಶಿಕ್ಷಕ ಹುದ್ದೆ | ಶಾಲಾ ಮಾತೆ ಹುದ್ದೆ | ಪ್ರಾಥಮಿಕ ಶಾಲಾ (1 ರಿಂದ 5ನೇ ತರಗತಿ) (ಭಾಷೆ) ಹುದ್ದೆಗಳು | ಪ್ರಾಥಮಿಕ ಶಾಲಾ (1 ರಿಂದ 5ನೇ ತರಗತಿ) (ವಿಜ್ಞಾನ – ಗಣಿತ ಹುದ್ದೆಗಳು | ಪ್ರಾಥಮಿಕ ಶಾಲಾ (6 ರಿಂದ 8ನೇ ತರಗತಿ) (ಭಾಷೆ) ಹುದ್ದೆಗಳು | ಪ್ರಾಥಮಿಕ ಶಾಲಾ (6 ರಿಂದ 8ನೇ ತರಗತಿ) (ವಿಜ್ಞಾನ ಗಣಿತ) ಹುದ್ದೆಗಳು | ಪ್ರಾಥಮಿಕ ಶಾಲಾ (6 ರಿಂದ 8ನೇ ತರಗತಿ) (ಸಮಾಜ ಪಾಠಗಳು) ಹುದ್ದೆಗಳು | ಮುಖ್ಯಶಿಕ್ಷಕ ಹುದ್ದೆ | ಹಿರಿಯ ಮುಖ್ಯ ಶಿಕ್ಷಕ ಹುದ್ದೆ |
| **11** | **12** | **13** | **14** | **15** | **16** | **17** | **18** | **19** | **20** |
| ಒಟ್ಟು | | | | | | | | | |

| ಒಟ್ಟು ಖಾಲಿ ಇರುವ ಹುದ್ದೆಗಳ ಸಂಖ್ಯೆ (ಆಯಾ ವೃಂದವಾರು) | | | ಒಟ್ಟು ಖಾಲಿ ಇರುವ ಹುದ್ದೆಗಳ ಸಂಖ್ಯೆ | ಶಾಲೆ ಮಾತೆ ಹುದ್ದೆಗಳ ಮೂಲ ಸಂಖ್ಯೆಯಲ್ಲಿ ನಿವೃತ್ತಿ ಯಾಗಿರುವ ಹುದ್ದೆಗಳ ಸಂಖ್ಯೆ (ಸದರಿ ಹುದ್ದೆಗಳು ಶಾಲಾ ಮಾತೆಯವರ ನಿವೃತ್ತಿ ನಂತರ ತನ್-ತಾನೆ ರದ್ದಾಗುತ್ತವೆ) (ಕಾಲಂ 23) | ಷರಾ |
|---|---|---|---|---|---|
| ದೈಹಿಕ ಶಿಕ್ಷಕ ಹುದ್ದೆ | ಸಂಗೀತ ಶಿಕ್ಷಕ ಹುದ್ದೆ | ಶಾಲೆ ಮಾತೆ ಹುದ್ದೆಗಳ | | | |
| 21 | 22 | 23 | 24 | 25 | 26 |
| ಒಟ್ಟು | | | | | |

(ಡಾ॥ ಪಿ.ಸಿ.ಜಾಫರ್)
ಆಯುಕ್ತರು

ಇವರಿಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಇವರಿಗೆ ಅಗತ್ಯ ಕ್ರಮಕ್ಕಾಗಿ
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ (ಉಪನಿರ್ದೇಶಕರ ಮುಖಾಂತರ)

ಪ್ರತಿಯನ್ನು

1. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಕರ್ನಾಟಕ ಸರ್ಕಾರ, ಬಹು ಮಹಡಿಗಳ ಕಟ್ಟಡ, ಬೆಂಗಳೂರು, ಇವರಿಗೆ ಗೌರವಪೂರ್ವಕವಾಗಿ ಮಾಹಿತಿಗಾಗಿ ಸಲ್ಲಿಸಿದೆ.
2. ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಮತ್ತು ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ, ಬೆಂಗಳೂರು
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಗೆ
4. ಅಪರ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬರಗಿ / ಧಾರವಾಡ
5. ಹಿರಿಯ ಸಹಾಯಕ ನಿರ್ದೇಶಕರು, ಡೈಸ್ ಶಾಖೆ, ಅಗತ್ಯ ಕ್ರಮಗಳನ್ನು ಕೈಗೊಂಡು ಜಿಲ್ಲೆಗಳಿಗೆ ಶಾಲಾವಾರು ಶಿಕ್ಷಕ ಹುದ್ದೆಗಳ ಹಂಚಿಕೆ ಮಾದರಿಯನ್ನು ನೀಡಲು ತಿಳಿಸಿದೆ.
6. ಹಿರಿಯ ಸಹಾಯಕ ನಿರ್ದೇಶಕರು, ಇ-ಆಡಳಿತ ವಿಭಾಗ, ಆಯುಕ್ತರ ಕಛೇರಿ, ಬೆಂಗಳೂರು, ಇವರಿಗೆ ಅಗತ್ಯ ಕ್ರಮಕ್ಕಾಗಿ.
7. ಕ/ಪ್ರ,

(ಡಾ॥ ಪಿ.ಸಿ.ಜಾಫರ್)
ಆಯುಕ್ತರು

ಅನುಬಂಧ-1

**Government Primary Schools - Sanctioned and Working strength**

**(Approximation based on RTE requirement and Sanctioned Cadre strength of 188540**

| Sl.No. | District | As per DISE appropximation and minor adjustments for 188540 | As per DISE appropximation | As per DISE appropximation | PET | Music | Drawing | Total Sanctioned |
|---|---|---|---|---|---|---|---|---|
| | | AM (round of) including Minority + Malanadu+Nursery) | AM for NaliKali | HM (as per rationalisation ) | PET | Music | Drawing | |
| 1 | BAGALKOT | 6374 | 70 | 783 | 253 | 1 | 7 | 7488 |
| 2 | BALLARI | 7219 | 75 | 788 | 293 | 8 | 7 | 8390 |
| 3 | BELAGAVI | 6479 | 238 | 732 | 280 | 4 | 8 | 7741 |
| 4 | BELAGAVI CHIKKODI | 7996 | 221 | 930 | 318 | 5 | 9 | 9479 |
| 5 | BENGALURU RURAL | 2937 | 31 | 235 | 100 | 2 | 4 | 3309 |
| 6 | BENGALURU U NORTH | 2304 | 44 | 210 | 54 | 5 | 7 | 2624 |
| 7 | BENGALURU U SOUTH | 3780 | 49 | 366 | 162 | 20 | 7 | 4384 |
| 8 | BIDAR | 4917 | 226 | 631 | 240 | 8 | 6 | 6028 |
| 9 | CHAMARAJANAGARA | 2620 | 16 | 325 | 123 | 3 | 3 | 3090 |
| 10 | CHIKKABALLAPURA | 3857 | 52 | 331 | 150 | 7 | 6 | 4403 |
| 11 | CHIKKAMANGALURU | 3810 | 34 | 314 | 306 | 23 | 7 | 4494 |
| 12 | CHITRADURGA | 5326 | 52 | 697 | 207 | 11 | 6 | 6299 |
| 13 | DAKSHINA KANNADA | 3651 | 0 | 494 | 291 | 4 | 7 | 4447 |
| 14 | DAVANAGERE | 4985 | 89 | 626 | 263 | 12 | 7 | 5982 |
| 15 | DHARWAD | 4235 | 71 | 522 | 207 | 2 | 10 | 5047 |
| 16 | GADAG | 3181 | 29 | 411 | 175 | 1 | 8 | 3805 |
| 17 | HASSAN | 5961 | 54 | 386 | 201 | 13 | 8 | 6623 |
| 18 | HAVERI | 5095 | 132 | 658 | 260 | 3 | 5 | 6153 |
| 19 | KALBURGI | 8422 | 157 | 943 | 338 | 3 | 11 | 9874 |
| 20 | KODAGU | 1298 | 1 | 156 | 113 | 2 | 3 | 1573 |
| 21 | KOLAR | 4696 | 91 | 377 | 153 | 5 | 6 | 5328 |
| 22 | KOPPAL | 5312 | 32 | 545 | 158 | 14 | 5 | 6066 |
| 23 | MANDYA | 4540 | 27 | 450 | 207 | 13 | 7 | 5244 |
| 24 | MYSURU | 6376 | 63 | 776 | 323 | 20 | 8 | 7566 |
| 25 | RAICHUR | 7120 | 62 | 750 | 202 | 18 | 8 | 8160 |
| 26 | RAMANAGARA | 3230 | 54 | 255 | 104 | 4 | 5 | 3652 |
| 27 | SHIVAMOGGA | 5687 | 56 | 594 | 212 | 15 | 8 | 6572 |
| 28 | TUMAKURU | 5322 | 70 | 414 | 218 | 6 | 13 | 6043 |
| 29 | TUMAKURU MADHUGIRI | 3467 | 30 | 408 | 151 | 6 | 5 | 4067 |
| 30 | UDUPI | 2044 | 0 | 240 | 134 | 3 | 4 | 2425 |
| 31 | UTTARA KANNADA | 2684 | 40 | 227 | 114 | 4 | 4 | 3073 |
| 32 | UTTARA KANNADA SIRSI | 3376 | 32 | 272 | 103 | 2 | 2 | 3787 |
| 33 | VIJAYAPURA | 8416 | 193 | 956 | 224 | 8 | 11 | 9808 |
| 34 | YADAGIRI | 4865 | 59 | 453 | 135 | 4 | 2 | 5518 |
| 35 | **Total** | **161580** | **2450** | **17255** | **6772** | **259** | **224** | **188540** |

ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)
ಸಾ.ಶಿ.ಇಲಾಖೆ, ಆಯುಕ್ತರ ಕಛೇರಿ
ಬೆಂಗಳೂರು.

# ಹುದ್ದೆ ಹಂಚಿಕೆ ಕೋಷ್ಟಕ

## ಕಿರಿಯ ಪ್ರಾಥಮಿಕ ಶಾಲೆ

| Enrollment Range | ಶಿಕ್ಷಕರು | ಮಲೆನಾಡು (61 ಕ್ಕಿಂತ ಹೆಚ್ಚಿನ ದಾಖಲಾತಿ ಇರುವ ಶಾಲೆಗಳಲ್ಲಿ , 120ರವರೆಗೆ) | ಭಾಷಾ ಅಲ್ಪಸಂಖ್ಯಾತ ಶಾಲೆ |
|---|---|---|---|
| 1 to 10 | 1 | 1 | 01 + 01 ಕನ್ನಡ ಶಿಕ್ಷಕರು |
| 11 ರಿಂದ 60 | 2 | 2 | 02 + 01 (31 ಕ್ಕಿಂತ ಹೆಚ್ಚಿದ್ದರೆ ಒಬ್ಬರು) |
| 61 ರಿಂದ 90 | 3 | 4 | 03 + 01 |
| 91 ರಿಂದ 120 | 4 | 5 | 04 + 01 |
| 121 ರಿಂದ 200 | 6 | 6 | 6 |
| 201 ರಿಂದ 240 | 7 | 7 | 7 |
| 241 ರಿಂದ ಮೇಲ್ಪಟ್ಟು | 1:40 ಅನುಪಾತ | 1:40 ಅನುಪಾತ | 1:40 ಅನುಪಾತ |

## ಹಿರಿಯ ಪ್ರಾಥಮಿಕ ಶಾಲೆ

| Enrollment Range | 6 ಮತ್ತು 7 ತರಗತಿ ಇರುವ ಶಾಲೆಗಳು | 6, 7 ಮತ್ತು 8ನೇ ತರಗತಿ ಇರುವ ಶಾಲೆಗಳು |
|---|---|---|
| 1 ರಿಂದ 10 | 1 | 1 |
| 11 ರಿಂದ 70 | 2 | 3 |
| 71 ರಿಂದ 105 | 3 | 3 |
| 105 ರಿಂದ 120 | 1:35 ಅನುಪಾತ | 1:35 ಅನುಪಾತ |
| 121 ರಿಂದ 156 | 4 | 4 |
| 157 ರಿಂದ 191 | 5 | 5 |
| 192 ರಿಂದ 226 | 6 | 6 |
| 227 ರಿಂದ 261 | 7 ಹೀಗೆ | 7 ಹೀಗೆ |

**** ಮೇಲಿನ ಅನುಪಾತದ ಶ್ರೇಣಿಯನ್ನು ಪರಿಗಣಿಸುವಾಗ, ಆಯಾ ಶ್ರೇಣಿಯ 0.5 ಭಿನ್ನರಾಶಿಯನ್ನು ಪರಿಗಣಿಸಿ ರೌಂಡ್ ಆಫ್ ಮಾಡಿ ಶಿಕ್ಷಕರ ಸಂಖ್ಯೆಯನ್ನು ಲೆಕ್ಕ ಹಾಕತಕ್ಕದ್ದು

### Post Roster - LPS (1 to 5)

| | |
|---|---|
| 1ನೇ ಹುದ್ದೆ | ಭಾಷೆಗಳು ( ಆಯಾ ಮಾಧ್ಯಮ) |
| 2ನೇ ಹುದ್ದೆ | ಗಣಿತ – ವಿಜ್ಞಾನ |
| 3ನೇ ಹುದ್ದೆ | ಭಾಷೆಗಳು (ಆಂಗ್ಲ) |
| 4ನೇ ಹುದ್ದೆ | ಗಣಿತ – ವಿಜ್ಞಾನ |
| 5ನೇ ಹುದ್ದೆ | ಭಾಷೆಗಳು ( ಆಯಾ ಮಾಧ್ಯಮ) |

ಹೀಗೆ ಮುಂದುವರೆಯುತ್ತದೆ

*** ದೈಹಿಕ ಶಿಕ್ಷಕ ಹುದ್ದೆಗಳು ಮತ್ತು ಸಂಗೀತ/ಚಿತ್ರಕಲಾ ಶಿಕ್ಷಕ ಹುದ್ದೆಗಳು ಪಿಟಿಆರ್ ಲೆಕ್ಕಾಚಾರದೊಳಗೆ ಬರುವುದಿಲ್ಲ. ಅವು ಕ್ರಮವಾಗಿ 200 ಕ್ಕಿಂತ ಮತ್ತು 240ಕ್ಕಿಂತ ಹೆಚ್ಚಿನ ದಾಖಲಾತಿ ಇರುವ ಹಿರಿಯ ಪ್ರಾಥಮಿಕ ಶಾಲೆಗಳಿಗೆ ನೀಡತಕ್ಕದ್ದು. ಆ ಸಂಖ್ಯೆಯ ದಾಖಲಾತಿ ಇರುವ ಶಾಲೆಗಳ ಕೊರತೆ ಇದ್ದಲ್ಲಿ ಇಳಿಕೆ ಕ್ರಮಾಂಕದಲ್ಲಿ ನಂತರದ ಹೆಚ್ಚಿನ ದಾಖಲಾತಿ ಇರುವ ಶಾಲೆಗಳಿಗೆ ನೀಡತಕ್ಕದ್ದು.

### Post Roster - HPS (with 6 to 7/8)

| | | |
|---|---|---|
| 1ನೇ ಹುದ್ದೆ | ಭಾಷೆಗಳು (ಆಯಾ ಮಾಧ್ಯಮ) | ಭಾಷೆಗಳು (ಆಯಾ ಮಾಧ್ಯಮ) |
| 2ನೇ ಹುದ್ದೆ | ಗಣಿತ – ವಿಜ್ಞಾನ | ಗಣಿತ – ವಿಜ್ಞಾನ |
| 3ನೇ ಹುದ್ದೆ | ಭಾಷೆಗಳು (ಆಂಗ್ಲ) | ಸಮಾಜ ಪಾಠಗಳು |

60 ದಾಖಲಾತಿಗಿಂತ ಹೆಚ್ಚು ಇರುವ ಹಿಪ್ರಾಶಾಲೆಗೆ (ಕಿರಿಯ ಪ್ರಾಥಮಿಕ ತರಗತಿಗಳಿದ್ದರೆ ಅಲ್ಲಿನ ದಾಖಲಾತಿ ಸಹ ಪರಿಗಣಿಸಿ) 3ನೇ ಹುದ್ದೆಯು ಮುಖ್ಯ ಶಿಕ್ಷಕ ಹುದ್ದೆ (ಪಿಟಿಆರ್ ಒಳಗೆ) – ಮುಖ್ಯ ಶಿಕ್ಷಕರ ಬೋಧನಾ ವಿಷಯ ಗಮನಿಸಿ ಸಹ ಶಿಕ್ಷಕ ಹುದ್ದೆಯ ವಿಷಯದ ಬದಲಿಗೆ ಪರಿಗಣಿಸಬೇಕು (250 ಕ್ಕಿಂತ ಹೆಚ್ಚಿನ ದಾಖಲಾತಿಯಿದ್ದರೆ ಪದವೀಧರೇತರ ಮುಖ್ಯ ಶಿಕ್ಷಕ ಹುದ್ದೆ ಯನ್ನು ಪಿಟಿಆರ್ ಲೆಕ್ಕಾಚಾರದೊಳಗೇ ನೀಡತಕ್ಕದ್ದು. 400 ದಾಖಲಾತಿ ಮೀರಿದರೆ ಮುಖ್ಯ ಶಿಕ್ಷಕ ಹುದ್ದೆ ಪಿಟಿಆರ್ ಹೊರತು)

| | | |
|---|---|---|
| 4ನೇ ಹುದ್ದೆ | ಗಣಿತ – ವಿಜ್ಞಾನ | ಭಾಷೆಗಳು (ಆಂಗ್ಲ ) |
| 5ನೇ ಹುದ್ದೆ | ಭಾಷೆಗಳು ( ಹಿಂದಿ) | ಗಣಿತ – ವಿಜ್ಞಾನ |
| 6ನೇ ಹುದ್ದೆ | ಗಣಿತ – ವಿಜ್ಞಾನ | ಸಮಾಜ ಪಾಠಗಳು |
| 7ನೇ ಹುದ್ದೆ | ಭಾಷೆಗಳು (ಆಯಾ) | ಭಾಷೆಗಳು ( ಹಿಂದಿ) |
| 8ನೇ ಹುದ್ದೆ | ಗಣಿತ – ವಿಜ್ಞಾನ | ಗಣಿತ – ವಿಜ್ಞಾನ |
| 9ನೇ ಹುದ್ದೆ | ಭಾಷೆಗಳು (ಆಂಗ್ಲ) | ಸಮಾಜ ಪಾಠಗಳು |
| 10ನೇ ಹುದ್ದೆ | ಗಣಿತ – ವಿಜ್ಞಾನ | ಭಾಷೆಗಳು (ಆಯಾ ಮಾಧ್ಯಮ) |

ಹೀಗೆ ಮುಂದುವರೆಯುತದೆ